ಸಿ. ಸಿ. ನಂ.- **286/2024**

ಸಿ.ಡಬ್ಲ್ಯೂ.- **08** / ಪಿ.ಡಬ್ಲ್ಯೂ.- **03**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ 09-06-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಭರತ್ |
| ತಂದೆಯ ಹೆಸರು - | ಯಮುನಪ್ಪ |
| ವಯಸ್ಸು - | 34 ವರ್ಷಗಳು |
| ಉದ್ಯೋಗ - | ಚಾಲಕ |
| ವಾಸಸ್ಥಳ - | ಎಂ.ಜೆ.ನಗರ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಸಾಕ್ಷಿ ನಿಪಿ 2 ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.- 2 ಸಿ ಎಂದು ಗುರುತಿಸಲಾಯಿತು. ನಿಪಿ 3 ಕಚ್ಚಾನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 4 ಭಾವಚಿತ್ರವನ್ನು ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು 2023 ನೇ ಇಸವಿಯಲ್ಲಿ ಪೊಲೀಸರು ಅಪಘಾತವಾದ ಸ್ಥಳವಾದ ಕೊಂಡನಾಯ್ಕನಹಳ್ಳಿಯ ಸಾಯಿಬಾಬಾ ದೇವಸ್ಥಾನದ ಹತ್ತಿರ ಬರಲು ನನ್ನನ್ನು ಮತ್ತು ಚಾಸಾ 7 ರವರನ್ನು ಕರೆದಿದ್ದರು. ಸದರಿ ಸ್ಥಳದಲ್ಲಿ ಪೊಲೀಸರು, ವೀರಭದ್ರ ಚನ್ನಪ್ಪ ಎನ್ನುವವರು ಇದ್ದರು. ಸದರಿ ವೀರಭದ್ರಚನ್ನಪ್ಪ ತಾತರವರು ಘಟನಾ ಸ್ಥಳವನ್ನು ನಮಗೆ ತೋರಿಸಿದರು, ನಂತರ ಪೊಲೀಸರು ಪಂಚನಾಮೆಯನ್ನು ಜರುಗಿಸಿ ಕಚ್ಚಾ ನಕಾಶೆಯನ್ನು ತಯಾರಿಸಿದರು. ಆಗ ಸಮಯ ಸುಮಾರು ಬೆಳಿಗ್ಗೆ 10.30 ರಿಂದ 11.00 ಗಂಟೆಯಾಗಿತ್ತು. ಸಾಕ್ಷಿ ನಿಪಿ 6 ಜಪ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ 6 ಡಿ ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ 5 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಾನು ಠಾಣೆಯಲ್ಲಿ ಅಪಘಾತದಲ್ಲಿ ಭಾಗಿಯಾದ ಎರಡು ಮೊ.ಸೈ ಗಳನ್ನು ಪೊಲೀಸರು ಜಪ್ತು ಪಡೆಸಿಕೊಳ್ಳುವ ಪಂಚನಾಮೆಯನ್ನು ಜರುಗಿಸುವಾಗ ಮಾಡಿರುತ್ತೇನೆ. ಸದರಿ ವಾಹನಗಳಲ್ಲಿ ಒಂದು ಯುನಿಕಾರ್ನ್ ವಾಹನ ಹಾಗೂ ಸ್ಪ್ಲೆಂಡರ್ ವಾಹನ ಇತ್ತು. ಆಗ ಸಮಯ ಬೆಳಿಗ್ಗೆ 11.30 ರಿಂದ 12.00 ಗಂಟೆಯಾಗಿತ್ತು. ಪೊಲೀಸರು ಸದರಿ

ಸಿ. ಸಿ. ನಂ.- 286/2024

ಸಿ.ಡಬ್ಲ್ಯೂ- 08 / ಪಿ.ಡಬ್ಲ್ಯೂ- 03

ಪಂಚನಾಮೆ ಜರುಗಿಸುವಾಗ ಭಾವಚಿತ್ರ ತೆಗೆದರು. ಸದರಿ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ನಿಪಿ 5 ಭಾವಚಿತ್ರಗಳಲ್ಲಿ ಇರುತ್ತವೆ.

ಪಾಟೀಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಎಸ್ ಕೆ ಡಿ ಅರ್ ರವರಿಂದ-

ನನಗೆ ವೀರಭದ್ರಪ್ಪ ಚೆನ್ನಪ್ಪ ಅವರ ಪರಿಚಯ ಇಲ್ಲ. ಸದರಿಯವರು ನಮ್ಮ ಜೊತೆ ಎರಡು ಬಾರಿ ಬಂದಿದ್ದರಿಂದ ನನಗೆ ಅವರ ಹೆಸರು ಪರಿಚಯವಿರುತ್ತದೆ. ನನ್ನ ಜೊತೆ ಚಾಸಾ 7 ರವರು ಸಹ ಇದ್ದರು. ಸದರಿ ಚಾಸಾ 7 ರವರು ಸಹಿ ಮಾಡಿದ ದಾಖಲೆಗಳೆಲ್ಲ ನಾನು ಸಹ ಸಹಿ ಮಾಡಿರುತ್ತೇನೆ. ಅದೇ ರೀತಿ ಚಾಸಾ 7 ರವರು ಯಾವ ಸ್ಥಳಗಳಲ್ಲಿ ಸದರಿ ದಾಖಲೆಗಳಿಗೆ ಸಹಿ ಮಾಡಿರುತ್ತಾರೇ ಅಲ್ಲಿ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಕೊಂಡನಾಯ್ಕನಹಳ್ಳಿ ಗ್ರಾಮದಲ್ಲಿ ಘಟನಾ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಎರಡು ಪಂಚನಾಮೆಗಳಿಗೆ ಪೊಲೀಸ ಠಾಣೆಯಲ್ಲಿಯೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಒಂದು ಸಹಿಯನ್ನು ಘಟನಾ ಸ್ಥಳದಲ್ಲಿ ಹಾಗೂ ಇನ್ನೊಂದು ಸಹಿಯನ್ನು ಠಾಣೆಯಲ್ಲಿ ಮಾಡಿರುವುದಾಗಿ ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗದೆ ಇದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಈ ಪ್ರಕರಣಕ್ಕೆ ಅನಕೂಲವಾಗುವಂತೆ ಪೊಲೀಸರು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆ ಸ್ಥಳದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ನಮ್ಮ ಸಮಕ್ಷಮ ಪಂಚನಾಮೆಯನ್ನು ಪೊಲೀಸರು ಜರುಗಿಸದೆ ಇದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.